ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 185-191
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜೇನುಕುರುಬ ಬುಡಕಟ್ಟು ಸಮುದಾಯದ ಮುಟ್ಟಿನ (ಋತುಚಕ್ರದ) ಆಚರಣೆಗಳು ಮತ್ತು ವಿಧಿ–ನಿಷೇಧಗಳು

**ಜ್ಯೋತಿ ಇ**
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

***Abstract:***
*ಬುಡಕಟ್ಟು ಸಮುದಾಯಗಳಲ್ಲಿ ವಾರ್ಷಿಕ ಆಚರಣೆ ಮತ್ತು ಜೀವನಾವರ್ತನಾ ಆಚರಣೆ ಎಂಬ ಎರಡು ರೀತಿಯ ಆಚರಣೆಗಳಿವೆ. ಇವರಲ್ಲಿ ಹುಟ್ಟಿನಿಂದ ಸಾವಿನವರೆಗೂ ಹಲವು ರೀತಿಯ ಆಚರಣೆ ಮತ್ತು ಸಂಪ್ರದಾಯಗಳಿದ್ದು, ತಲತಲಾಂತರದಿಂದ ಇದನ್ನು ಪಾಲಿಸಿಕೊಂಡು ಬಂದಿದ್ದಾರೆ. ಆದರೆ, ಆಧುನಿಕ ಕಾಲಘಟ್ಟದಲ್ಲಿ ಸ್ವಲ್ಪ ಬದಲಾವಣೆಯಾಗಿರುವುದನ್ನು ಬಿಟ್ಟರೆ ಅವರ ಮನಸ್ಸಿನ ಆಳದಲ್ಲಿ ಈ ನಂಬಿಕೆಗಳು ಬೇರೂರಿದೆ. ಇವರ ಸಂಪ್ರದಾಯ ಆಚರಣೆ, ಆಹಾರ ಮತ್ತು ಸಂಸ್ಕೃತಿಗೆ ಒಂದು ರೀತಿಯ ಸಂಬಂಧವಿದೆ. ಏಕೆಂದರೆ, ಜನನ, ನಾಮಕರಣ, ಋತುಮತಿ, ಗರ್ಭಿಣಿ, ಬಾಣಂತಿ, ಮದುವೆ ಇತ್ಯಾದಿ ಆಚರಣೆಯಲ್ಲಿ ಅವರ ಆಹಾರ ಪದ್ಧತಿಯು ಅವರ ಸಂಸ್ಕೃತಿಯನ್ನು ತಿಳಿಸುತ್ತದೆ. ಈ ಎಲ್ಲ ಆಚರಣೆಗಳು ವಿಧಿ–ವಿಧಾನಗಳು ಇವೆಲ್ಲವೂ ಅಲಿಖಿತ ಶಾಸನಗಳಾಗಿವೆ. ಈ ಎಲ್ಲ ವಿಧಿ–ನಿಷೇಧ ನೀತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಹೋಗಬೇಕೆಂದು ಇವರ ನಂಬಿಕೆಯಾಗಿರುತ್ತದೆ. ಪ್ರಸ್ತುತ ಲೇಖನದಲ್ಲಿ ಜೇನುಕುರುಬ ಬುಡಕಟ್ಟು ಸಮುದಾಯದ ಮುಟ್ಟಿನ (ಋತುಚಕ್ರದ) ಆಚರಣೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಬುಡಕಟ್ಟು ಸಮುದಾಯ, ಜೀವನಾವರ್ತಕ ಆಚರಣೆ, ಬುಡಕಟ್ಟು ಸಮುದಾಯ, ಜೇನುಕುರುಬ ಸಮುದಾಯ.*

## ಪೀಠಿಕೆ

ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳು ತಮ್ಮದೇಯಾದ ಆಚಾರ, ವಿಚಾರ, ನಿಯಮ ಪಾಲಿಸಿಕೊಂಡು ಬರುತ್ತಿದ್ದಾರೆ. ಅದರಲ್ಲೂ ಜೇನುಕುರುಬ, ಬೆಟ್ಟಕುರುಬ, ಸೋಲಿಗ, ಹಸಲರು, ಗೌಡಲು ಮುಂತಾದ ಸಮುದಾಯಗಳು ಹೆಚ್ಚಾಗಿ ತಾವು ಪರಂಪರಾನುಗತವಾಗಿ ಪಾಲಿಸಿಕೊಂಡು ಬಂದಿರುವ ಆಚರಣೆಯನ್ನು ಮಾತ್ರ ಬಿಡುವುದಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಜನಪರ ಸಂಸ್ಕೃತಿಯನ್ನು ಬೆಳಸಿದ್ದು ಇಂತಹ ಸಮುದಾಯಗಳೆಂದು ಹೇಳಬಹುದು.

ನಿಸರ್ಗ ಮತ್ತು ಮಾನವ ಸಂಬಂಧವು ಪರಸ್ಪರ ಆರೋಗ್ಯಪೂರಕವಾಗಿ ಇರುವುದು. ಹಾಗಾಗಿಯೇ ನಿಸರ್ಗವು ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗಳಾದಾಗ ನಿಸರ್ಗದಲ್ಲಿ ಸಿಗುವ ಆಹಾರ ಪದಾರ್ಥಗಳು ಮತ್ತು ಗಿಡಮೂಲಿಕೆಗಳಿಂದ ದೇಹವನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲು ಸಹಕಾರಿಯಾಗಿದೆ. ಈ ಎಲ್ಲ ಜ್ಞಾನವು

***Please cite this article as:*** ಜ್ಯೋತಿ, ಇ. (2025). ಜೇನುಕುರುಬ ಬುಡಕಟ್ಟು ಸಮುದಾಯದ ಮುಟ್ಟಿನ (ಋತುಚಕ್ರದ) ಆಚರಣೆಗಳು ಮತ್ತು ವಿಧಿ–ನಿಷೇಧಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 185–191

ಆದಿವಾಸಿಗಳಲ್ಲಿ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತಲೇ ಇತ್ತು. ಅದರ ಜೊತೆಗೆ ನಿಸರ್ಗದ ಪರಿಣಾಮಗಳಿಂದ ತಮ್ಮ ದೇಹದಲ್ಲಾಗುವ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಾಗುವ ಬದಲಾವಣೆಯನ್ನು ಸಹ ಗಮನಿಸುತ್ತಿದ್ದರು. ಕಾಲನಂತರ, ಈ ತಿಳಿವಳಿಕೆಯನ್ನು ದಾಖಲಿಸುತ್ತಾ ಮೌಖಿಕವಾಗಿ ಪಸರಿಸುತ್ತಾ ಹೋದರು. ಈ ಮೌಖಿಕ ಜ್ಞಾನವು ಇಂದಿಗೂ ಜೀವಂತವಾಗಿ ಬುಡಕಟ್ಟುಗಳಲ್ಲಿ ಇರುವುದನ್ನು ಕಾಣಬಹುದಾಗಿದೆ.

ಜೇನುಕುರುಬರು ಕರ್ನಾಟಕದ ಪ್ರಮುಖ ಆದಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದ್ದು, ವಿಶೇಷವಾಗಿ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಇವರು ಅರಣ್ಯಾಧಾರಿತ ಜೀವನ ನಡೆಸುವ ಸಮುದಾಯ. ಜೇನುಕುರುಬ ಎಂಬ ಪದವು ಮೂಲತಃ ಜೇನು ಸಂಗ್ರಹ ಮಾಡುವುದ್ದರಿಂದ ಬಂದಿದೆ.

ಜೇನುಕುರುಬರನ್ನು ದಕ್ಷಿಣ ಭಾರತದ ಅತ್ಯಂತ ಹಳೆಯ ಬುಡಕಟ್ಟು ಸಮುದಾಯಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ. ಇವರು ತಮಗೆ "ಅರಣ್ಯದ ಮಕ್ಕಳು" ಎಂಬ ಹೆಸರನ್ನೂ ಬಳಸುತ್ತಾರೆ. ಇವರು ಮುಖ್ಯವಾಗಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಅಥವಾ ಅರಣ್ಯದೊಳಗೆ ಗುಡ್ಡಗಾಡುಗಳಲ್ಲಿ ಸಣ್ಣ ಹಾಡಿಗಳು ಅಥವಾ ಕಾಲೋನಿಗಳಲ್ಲಿ ವಾಸಿಸುತ್ತಾರೆ. ಇವರ ಆರ್ಥಿಕ ಜೀವನ ಎಂದರೆ, ಜೇನು ಸಂಗ್ರಹಣೆ, ಕಾಡು ಹಣ್ಣುಗಳು, ಬೇರುಗಳು, ಎಲೆಗಳು, ಕಾಡುಮರದ ಉತ್ಪನ್ನಗಳನ್ನು ಸಂಗ್ರಹಿಸುವುದು. ಇತ್ತೀಚಿನ ದಿನಗಳಲ್ಲಿ ಇವರು ತೋಟದ ಕಾರ್ಮಿಕರಾಗಿ, ಕೃಷಿ ಕೂಲಿಕಾರ್ಮಿಕರಾಗಿ ದುಡಿದು ಜೀವನ ಸಾಗಿಸುತ್ತಿದ್ದಾರೆ. ಇವರು ತಮ್ಮದೇಯಾದ ಭಾಷೆಯನ್ನು ಹೊಂದಿದ್ದು, ಕನ್ನಡವನ್ನೂ ಮಾತನಾಡುತ್ತಾರೆ. ಆದರೆ ಅರಣ್ಯದ ಜೀವನಶೈಲಿ ಹಾಗೂ ತಾವು ಸೇರಿದ ಬುಡಕಟ್ಟು ತತ್ವಗಳಿಂದ ಪ್ರೇರಿತವಾದ ಪಾರಂಪರಿಕ ಗೀತೆಗಳು, ಕಥೆಗಳು, ನೃತ್ಯಗಳು ಇವೆ.

**ಧಾರ್ಮಿಕ ನಂಬಿಕೆಗಳು**

ಪ್ರಕೃತಿ ಆರಾಧನೆ ಇವರ ಪ್ರಮುಖ ಧಾರ್ಮಿಕ ಅಂಶವಾಗಿದೆ. ಅರಣ್ಯ, ಮರಗಳು, ಗುಡ್ಡಗಳು, ಮಳೆಯ ದೇವರು, ಹುಲಿ ಮುಂತಾದ ಪ್ರಕೃತಿ ಶಕ್ತಿಗಳಿಗೆ ವಿಶೇಷ ಪೂಜೆ ಮಾಡುತ್ತಾರೆ. ಇವರು ಇನ್ನೂ ಶಿಕ್ಷಣ, ಆರೋಗ್ಯ, ಭೂಮಿ ಹಕ್ಕು, ಉದ್ಯೋಗದಲ್ಲಿ ಇನ್ನೂ ಹಿಂದುಳಿದವರಾಗಿ ಪರಿಗಣಿಸಲ್ಪಡುತ್ತಾರೆ. ಒಟ್ಟಿನಲ್ಲಿ, ಜೇನುಕುರುಬರು ಕರ್ನಾಟಕದ ಅರಣ್ಯ–ಆಧಾರಿತ ಸಂಸ್ಕೃತಿ, ಪ್ರಕೃತಿ ನಂಬಿಕೆ ಮತ್ತು ಪಾರಂಪರಿಕ ಜೀವನವನ್ನು ಕಾಪಾಡಿಕೊಂಡಿರುವ ವಿಶಿಷ್ಟ ಬುಡಕಟ್ಟು ಸಮುದಾಯವಾಗಿದೆ.

ಭಾರತದ ವಿವಿಧ ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣುಮಕ್ಕಳಿಗೆ ಮೊದಲ ಬಾರಿಗೆ ಮುಟ್ಟಾಗುವ ಸಂದರ್ಭವು ಕೇವಲ ಜೈವಿಕ ಬದಲಾವಣೆ ಮಾತ್ರವಲ್ಲ, ಸಮುದಾಯದ ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಬಿಕೆಗಳೊಂದಿಗೆ ಆಳವಾಗಿ ಸಂಬಂಧ ಹೊಂದಿದೆ. ಕರ್ನಾಟಕದ ಜೇನು ಕುರುಬ ಬುಡಕಟ್ಟುಗಳು ಸಹ ಈ ಪರಂಪರೆಯನ್ನು ತಮ್ಮದೇ ಆದ ವಿಶೇಷ ವಿಧಿ–ವಿಧಾನಗಳೊಂದಿಗೆ ಪಾಲಿಸಿಕೊಂಡು ಬಂದಿವೆ.

ಜೇನುಕುರುಬರು ಕರ್ನಾಟಕದ ಪ್ರಮುಖ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದ್ದು, ತಮ್ಮದೇ ಆದ ಸಂಸ್ಕೃತಿ, ಆಚರಣೆಗಳು ಮತ್ತು ಪರಂಪರೆಗಳನ್ನು ಹೊಂದಿದ್ದಾರೆ. ಅವರ ಜೀವನಶೈಲಿ, ಪ್ರಕೃತಿಯೊಡನೆ ಹೊಂದಿಕೊಂಡಿದ್ದು, ಆಚರಣೆಗಳಲ್ಲಿ ಸಹ ಪ್ರಕೃತಿ, ಕುಲದೇವತೆ ಮತ್ತು ಸಮುದಾಯ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ.

ಜೇನು ಕುರುಬ ಸಮುದಾಯದಲ್ಲಿ ಹುಡುಗಿಗೆ ಮೊದಲ ಬಾರಿಗೆ ಋತುಸ್ರಾವ (ಮೂಡಣ)

ಬಂದಾಗ, ಆಕೆಯನ್ನು ಪವಿತ್ರವತಿ ಎಂದು ಪರಿಗಣಿಸಲಾಗುತ್ತದೆ. ಈ ಹಂತವನ್ನು ಹೆಣ್ಣುತನದ ದ್ವಾರಪ್ರವೇಶ ಎಂದು ಸಮುದಾಯವು ನೋಡುತ್ತದೆ. ಈ ಸಮಯದಲ್ಲಿ ಹುಡುಗಿಯನ್ನು ಮನೆಯೊಳಗೆ ಅಥವಾ ವಿಶೇಷವಾಗಿ ತಯಾರಿಸಿದ ಕಟ್ಟಿಗೆ ಮನೆಯಲ್ಲಿ (ಮಟ್ಟಿಗೋಣೆ) ಪ್ರತ್ಯೇಕವಾಗಿ ಇರಿಸಲಾಗುತ್ತದೆ.

**ಋತುಮತಿ ಶಾಸ್ತ್ರ**

ಕನ್ಯೆಯು ಋತುಮತಿ ಹೆಣ್ಣನ್ನು ಫಲವಂತಿಕೆಯ ಸಂಕೇತವೆಂದು, ತಾಯ್ತನವನ್ನು ಹೊತ್ತವಳೆಂದು ಭಾವಿಸುತ್ತಾರೆ. ಆದರೂ ಅವಳು ಮುಟ್ಟಾದಾಗ ಅವಳನ್ನು ಮೈಲಿಗೆಯೆಂದು, ಸೂತಕವೆಂದು ದೂರವಿಡುತ್ತಾರೆ. ಈ ಮೈಲಿಗೆಯು ಆ ಸಮುದಾಯದ ಯಜಮಾನನಿಂದಲೇ ಕಳೆಯಬೇಕೆಂದು ನಂಬಿದ್ದಾರೆ. ಈ ಆಚರಣೆಗಳು ಯಜಮಾನರಿಗೆ ಗೌರವ ಹಾಗೂ ತಲೆತಲಾಂತರದಿಂದ ಸಾಗಿಬಂದಿರುವ ಆಚರಣೆಗಳನ್ನು ಚಾಚುತಪ್ಪದೇ ಪಾಲಿಸಿಕೊಂಡು ಬರುತ್ತಾರೆ. ಹೆಣ್ಣು–ಗಂಡು ವಯೋಸಹಜ ದೇಹದಲ್ಲಿ ಮತ್ತು ಮಾನಸಿಕ ಬದಲಾವಣೆ ಕಂಡುಬರುತ್ತದೆ. ಹೆಣ್ಣಿಗೆ 12–15 ವಯೋಮಾನದೊತ್ತಿಗೆ ನಿಸರ್ಗ ಸಹಜವಾದ ಋತುಮತಿಯಾಗುವುದು ನಿಸರ್ಗಕ್ರಿಯೆ. ಹೆಣ್ಣು ಮುಟ್ಟಾದಾಗಲೇ ಅವಳ ಗರ್ಭಕೋಶ ಬೆಳೆಯಲು ಪ್ರಾರಂಭವಾಗುತ್ತದೆಂದು ಬಲವಾಗಿ ನಂಬಿ, ಇದು ಶುಭ ಸಂಕೇತವೆಂದು ತಿಳಿಯುತ್ತಾರೆ.

ಈ ಸಮುದಾಯದಲ್ಲಿ ಮೊದಲ ಬಾರಿಗೆ ಮುಟ್ಟಾದ ವಿಷಯವನ್ನು ಸಮುದಾಯದ ಯಜಮಾನರಿಗೆ ತಿಳಿಸುತ್ತಾರೆ. ನಂತರ, ಯಜಮಾನರಿಂದ ಋತುಮತಿಯಾದ ಹುಡುಗಿಗೆ ವಾಸಿಸಸಲು ಪ್ರತ್ಯೇಕವಾದ ಗುಡಿಸಲು ನಿರ್ಮಿಸಲು ತಿಳಿಸುತ್ತಾರೆ. ಇದನ್ನು 'ಗುಮ್ಮ'ದೊಳಗೆ ಕೂರಿಸುವುದು ಎಂದು ಕರೆಯುತ್ತಾರೆ. ಈ ಆಚರಣೆಯಲ್ಲಿ ಮಾವಿನ ಮರದ ರೆಂಬೆಯನ್ನು ಮೊದಲು ಕಡಿದು, ಅದರ ಸೊಪ್ಪು, ಅಡಲೇ ಮರದ ಸೊಪ್ಪು, ಸಾಗಡೆ ಸೊಪ್ಪು, ತಡಸ್ ಮರದ ಸೊಪ್ಪನ್ನು ಹಸಿಯಿದ್ದಾಗ ಕಡಿದು ಒಂದಕ್ಕೊಂದು ಸೇರಿಸಿ ಈ 'ಗುಮ್ಮ'ಕ್ಕೆ ಬಳಸುತ್ತಾರೆ. ಈ ಮರದ ಸೊಪ್ಪುಗಳು ಬೇಗ ಉದುರುವುದಿಲ್ಲ ಎನ್ನುವ ಕಾರಣಕ್ಕೆ ಇದನ್ನು ಬಳಸುತ್ತಾರೆ. ಹಾಗಾಗಿ ಇವುಗಳನ್ನು ಎಲೆ ಉದರದ ಮರಗಳು ಎಂದು ಕರೆಯುತ್ತಾರೆ. ಈ ಗುಮ್ಮವು ಸುಮಾರು ಒಂದು ವರ್ಷದವರೆಗೂ ಹಾಳಾಗದೇ ಇರುತ್ತದೆ. ಇದು ಮಳೆ ಮತ್ತು ಚಳಿಯಿಂದ ರಕ್ಷಿಸುತ್ತದೆ. ಈ ಗುಮ್ಮದೊಳಗೆ ಕೂರಿಸುವ ಮುನ್ನ ಮುತ್ತೈದೆಯರೆಲ್ಲ ಸೇರಿ ಅವಳಿಗೆ ಸ್ನಾನ ಮಾಡಿಸುತ್ತಾರೆ. ಯಾರು ಸೊಪ್ಪನ್ನು ತೆಗೆದುಕೊಂಡು ಬರುತ್ತಾರೋ, ಅವರೂ ಕೂಡ ಸ್ನಾನ ಮಾಡಿ ಮಡಿಯಿಂದ ಬರಬೇಕು. ಮಾವಿನ ತೋರಣ ಮತ್ತು ಬೇವಿನ ಸೊಪ್ಪು ಇದೆಲ್ಲವೂ ಶುಭದ ಸಂಕೇತವೆಂದು ನಂಬುತ್ತಾರೆ.

ಮೈನೆರೆದ ಹುಡುಗಿ ಗುಮ್ಮದೊಳಗೆ ಮಲಗಲು ಒಂದು 'ಮುಂಡಗೆ ಮಾದರಿ' (ಸೇನೆ ಹುಲ್ಲಿನ ಛಾಪೆ ಎಂತಲೂ ಕರೆಯುತ್ತಾರೆ.) ಈ ಚಾಪೆಯನ್ನು ಆ ಗುಮ್ಮದ ಒಳಗೆ ಹಾಕಿ ಆ ಹುಡುಗಿಯನ್ನು ಅದರೊಳಗೆ ಕೂರಿಸುತ್ತಾರೆ. ಒಮ್ಮೆ ಗುಮ್ಮದ ಒಳಗೆ ಪ್ರವೇಶ ಮಾಡಿದ ನಂತರ, ಅವಳಿಗೆ ದಿನ ಅರಿಶಿಣ ನೀರಿನ ಸ್ನಾನವನ್ನು ಮಾಡಿಸುತ್ತಾರೆ. ಎಲ್ಲಿಯವರೆಗೂ ಆ ಹುಡುಗಿ ಆ ಗುಮ್ಮದ ಒಳಗೆ ಇರುತ್ತಾಳೋ, ಅಲ್ಲಿಯವರೆಗೆ ಈ ರೀತಿಯ ಸ್ನಾನ ಮಾಡಿಸುತ್ತಾರೆ. ಇದರಿಂದ ಅವಳ ದೇಹದ ಆರೋಗ್ಯಕ್ಕೂ ಒಳ್ಳೆಯದು ಜೊತೆಗೆ ಮುಖದ ಕಾಂತಿಯನ್ನು ಹೆಚ್ಚಿಸಲು ಸಹ ಒಳ್ಳೆಯದೆಂದು ಭಾವಿಸುತ್ತಾರೆ. ರೋಗ ನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ ಎಂದು ನಂಬುತ್ತಾರೆ. ಈ ರೀತಿಯಲ್ಲಿ ಇರುವ ಹುಡುಗಿಯನ್ನು ಹಾಡಿಯವರು ಗುರುತಿಸಲು ಸಹಾಯ ಆಗುತ್ತದೆ ಎಂದು ನಂಬಿದ್ದಾರೆ. ಈ ಗುಮ್ಮದಲ್ಲಿರುವ ಹುಡುಗಿಯನ್ನು 'ಗುಮ್ಮದಮ್ಮಿ' ಎಂದು ಕರೆಯುತ್ತಾರೆ.

ನಂತರ, ಯಜಮಾನರು ನಿರ್ಮಿಸಿದ ಗುಡಿಸಲಿಗೆ ಪೂಜೆಯನ್ನು ಮಾಡುತ್ತಾರೆ. ಆನಂತರ ಮೈನೆರೆದ ಹುಡುಗಿಯ ಸೋದರ ಮಾವ ಮನೆಯ ಹೊರಗಡೆ

ಬೇವಿನ ಸೊಪ್ಪು, ಹೊಂಗೆ ಸೊಪ್ಪು, ಮುತ್ತಗದ ಸೊಪ್ಪು ಮತ್ತು ಮತ್ತಿ ಸೊಪ್ಪನ್ನು ಕಾಡಿನಿಂದ ತಂದು ಹೊರಗಡೆ ಗುಡಿಸಲನ್ನು ನಿರ್ಮಿಸುತ್ತಾನೆ. ಈ ರೀತಿಯ ಗುಡಿಸಲನ್ನು ಪಳ್ಳಿ, ಗುಡ್ಲು, ಗುಮ್ಮ ತಡಿಕೆ, ಎಂದು ಕರೆಯುತ್ತಾರೆ. ಈ ರೀತಿಯ ಸೊಪ್ಪುಗಳಿಂದ ನಿರ್ಮಿತವಾದ ಗುಡಿಸಲಿನಿಂದ ಬರುವ ಗಾಳಿಯು ಋತುಮತಿಯಾದ ಹೆಣ್ಣಿನ ಆರೋಗ್ಯಕ್ಕೆ ಒಳ್ಳೆಯದೆಂದು ಭಾವಿಸುತ್ತಾರೆ. ಕೆಲವು ಕಡೆ ಸೀರೆ ರವಿಕೆ ತೊಡಿಸಿ ಅವಳನ್ನು ಅಲಂಕರಿಸಿ ಗುಮ್ಮದ ಒಳಗೆ ಇರಿಸುತ್ತಾರೆ. ಅಕ್ಕಿಯ ಮೇಲೆ ತೆಂಗಿನ ಕಾಯಿ ಕನ್ನಡಿಯನ್ನಿಟ್ಟು ಕಳಸವನ್ನು ಇಡುತ್ತಾರೆ. ಈ ಕಳಸದ ಜೊತೆಗೆ ಇನ್ನು ಐದು ತಟ್ಟೆಯನ್ನು ಸೇರಿಸಿ, ಒಂದು ತಟ್ಟೆಯಲ್ಲಿ ಎಲೆ ಅಡಿಕೆ, ಎರಡನೇ ತಟ್ಟೆಯಲ್ಲಿ ಬಾಳೆ ಹಣ್ಣು, ಮೂರನೇ ತಟ್ಟೆಯಲ್ಲಿ ಅವಲಕ್ಕಿ ಕಡಲೆ, ನಾಲ್ಕನೆ ತಟ್ಟೆಯಲ್ಲಿ ಅಕ್ಕಿ, ಐದನೇ ತಟ್ಟೆಯಲ್ಲಿ ತೆಂಗಿನ ಕಾಯಿಯನ್ನು ಇಡುತ್ತಾರೆ.

ಹಾಡಿಯ ಯಜಮಾನನ ಜೊತೆಗೆ ನಾಲ್ಕು ಜನ ಮುತ್ತೈದೆಯರು ಸೇರಿ ಆ ಕಳಸವನ್ನು ತೆಗೆದುಕೊಂಡು ಮೂಡ (ಪೂರ್ವ), ಮುಳಗ (ಪಶ್ಚಿಮ), ತೆಂಕ(ಉತ್ತರ), ಬಡಗ(ದಕ್ಷಿಣ) ಈ ಎಲ್ಲ ದಿಕ್ಕುಗಳಿಗೆ ನಮಸ್ಕರಿಸಿ ತಂದಿಟ್ಟ ಎಲೆ, ಅಡಿಕೆ, ತೆಂಗಿನ ಕಾಯಿ, ಬಾಳೆಹಣ್ಣು, ಕಡಲೆ ಇವೆಲ್ಲವನ್ನು ಮೈನೆರೆದ ಹುಡುಗಿಯ ಮಂಡಿ, ಭುಜ ಮತ್ತು ಅವಳ ತಲೆಗೆ ಮುಟ್ಟಿಸಿ ಅವಳ ಸೀರೆ ಸೆರಗಿಗೆ ಹಾಕಿಸುತ್ತಾರೆ. ಆ ನಂತರ ಆ ಹುಡುಗಿಯನ್ನು ಆ ಗುಮ್ಮದ ಒಳಗೆ ಬಿಡುತ್ತಾರೆ. ನಂತರ, ಆ ಹಾಡಿಯ ಮುತ್ತೈದೆಯರನ್ನು ಕರೆಸಿ ಅವರಿಂದ ಅರಿಶಿಣದ ನೀರಿನಿಂದ ಸ್ನಾನವನ್ನು ಮಾಡಿಸುತ್ತಾರೆ. ಈ ರೀತಿಯಲ್ಲಿ ಮೊದಲ ಬಾರಿ ಹಾಕಿದ ನೀರನ್ನು ಕೆಟ್ಟ ನೀರೆಂದು ಭಾವಿಸುತ್ತಾರೆ. ಆ ಗುಡಿಸಲಿಗೆ ಹೋಗುವಾಗ ತಟ್ಟೆ, ಲೋಟ ಹಾಗೂ ಹಾಸಿಗೆಯನ್ನು ನೀಡುತ್ತಾರೆ. ಕೆಲವು ಕಡೆ ಹಾಡಿಯ ಯಜಮಾನನ ಅಪ್ಪಣೆಯನ್ನು ಪಡೆದ ನಂತರವೇ ಹುಡುಗಿಯ ಸೋದರ ಮಾವ ಎಲ್ಲ ತರದ ಸೊಪ್ಪನ್ನು ತರಲು ಹೋಗುತ್ತಾನೆ.

ಮೈನೆರೆದ ಹುಡುಗಿಯ ಜೊತೆಗೆ ಇರಲು ಚಿಕ್ಕ ಹುಡುಗಿಯನ್ನು ಕಳುಹಿಸಿಕೊಡುತ್ತಾರೆ. ಈ ಹುಡುಗಿಯನ್ನು ಬಿರಡಮ್ಮಿ ಎಂದು ಕರೆಯುತ್ತಾರೆ. ಈ ಹುಡುಗಿ ಮತ್ತು ಮೈನೆರೆದ ಹುಡುಗಿ ಸುಮಾರು ಒಂದು ತಿಂಗಳ ಕಾಲ ಆ ಗುಡಿಸಲಿನಲ್ಲಿಯೇ ಇರುತ್ತಾರೆ. ಇನ್ನು ಕೆಲವರು ಏಳು ಅಥವಾ ಒಂಬತ್ತು ತಿಂಗಳಿನವರೆಗೆ ಇಟ್ಟಿರುತ್ತಾರೆ. ಇನ್ನೂ ಕೆಲವರು ವರ್ಷಗಟ್ಟಲೆ ಇಟ್ಟಿರುತ್ತಾರೆ. ಈ ಸಮಯದಲ್ಲಿ ಹುಡುಗಿಯು ಹೊರಗೆ ಹೋಗುವಂತಿಲ್ಲ, ಶೌಚಾಲಯಕ್ಕೆ ಹೋಗುವಾಗ ಹಸಿ ಮೈ ಎಂದು ದುಷ್ಟ ಶಕ್ತಿಗಳು ಇವಳನ್ನು ನೋಡಿ ಆಕರ್ಷಿತವಾಗಬಾರದೆಂಬ ಉದ್ದೇಶದಿಂದ ಆಕೆಯ ಕೈಗೆ ಚಾಕು, ಕತ್ತಿಗಳನ್ನು ಕೊಡುತ್ತಾರೆ. ಈ ವೇಳೆ ಆಕೆಯು ಗಂಡಸರ ಮುಖವನ್ನು ನೋಡುವಂತಿಲ್ಲ ಎಂಬ ನಿಯಮವನ್ನು ಹಾಕುತ್ತಾರೆ. ಏಕೆಂದರೆ, ಅವಳಿಗೆ ಗಂಡಸಿನ ಮೇಲೆ ಆಕರ್ಷಣೆ ಆಗಬಾರದೆಂದು, ಗಂಡುಮಕ್ಕಳು ಆ ಹುಡಿಗಿಯ ಮೇಲೆ ಕಣ್ಣು ಹಾಕಬಾರದೆಂದು ಆದೃಷ್ಟಿಯಲ್ಲಿ ಲೈಂಗಿಕ ಬಯಕೆಗಳು ಹುಟ್ಟಬಾರದೆಂದು ಈ ಸಮಯದಲ್ಲಿ ಅವಳ ದೇಹ ಬಹಳ ಸೂಕ್ಷ್ಮವಾಗಿರುತ್ತದೆ. ಹೊರಗಡೆ ತಿರುಗಾಡಿದರೆ, ಅನೇಕ ರೋಗಗಳು ದೇಹದಲ್ಲಿ ಸೇರಿಕೊಂಡು ಅನಾರೋಗಕ್ಕೆ ತುತ್ತಾಗಬಹುದೆಂದು ಭಾವಿಸುತ್ತಾರೆ.

ಈ ಸಮಯದಲ್ಲಿ ಹೆಣ್ಣಿಗೆ ಶಾಸ್ತ್ರ, ನಂಬಿಕೆ, ಮಾಟ, ಮಂತ್ರ, ಭೂತ ಹೆಚ್ಚಾಗಿ ನಂಬುತ್ತಾರೆ. ಈ ಸಮಯದಲ್ಲಿ ದುಷ್ಟ ಶಕ್ತಿಗಳು ಇವಳ ಮೇಲೆ ಆಕ್ರಮಣ ಮಾಡಬಹುದು ಎಂಬ ಉದ್ದೇಶದಿಂದ ಗುಡಿಸಲನ್ನು ಹೊರಗಡೆ ನಿರ್ಮಾಣ ಮಾಡುತ್ತಾರೆ. ಋತುಮತಿಯಾದ ಹುಡುಗಿ ಹಗಲು ಹೊರಬರುವಂತಿಲ್ಲ, ರಾತ್ರಿ ಹೊತ್ತಲ್ಲಿ ಯಾರು ಇಲ್ಲದ ಸಮಯದಲ್ಲಿ ಬರಬಹುದು. ಹೆಣ್ಣು ಋತುಮತಿಯಾದ ಸಂದರ್ಭದಲ್ಲಿ ಅವಳ

ಗರ್ಭಕೋಶ ಚೆನ್ನಾಗಿ ಬೆಳೆಯಲು ಅವಳಿಗೆ ಪೌಷ್ಠಿಕ ಆಹಾರವನ್ನು ನೀಡುತ್ತಾರೆ. ಈ ಆಹಾರವನ್ನು ವಿಶೇಷವಾಗಿ ಆ ಮನೆಯ ಮಹಿಳೆಯರು, ಸಂಬಂಧಿಕರು, ಹಾಡಿಯ ಅಕ್ಕಪಕ್ಕದವರು ಸಿದ್ದಪಡಿಸಿ ನೀಡುತ್ತಾರೆ. ಪಾರಂಪರಿಕ ದಿನಗಳಲ್ಲಿ ಹಲವಾರು ಬಗೆಯ ಗಡ್ಡೆ–ಗೆಣಸು, ಸೊಪ್ಪು, ಬೆಲ್ಲ ಮುಂತಾದವನ್ನು ನೀಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಎಳ್ಳು, ಬೆಲ್ಲ, ಉದ್ದು, ಕೊಬ್ಬರಿ, ಹಣ್ಣನ್ನು ಮುಖ್ಯವಾಗಿ ನೀಡುತ್ತಾರೆ. ಕಪ್ಪು ಎಳ್ಳನ್ನು ಹುರಿದ ಬೆಲ್ಲದೊಡನೆ ಪುಡಿಮಾಡಿ ಉಂಡೆಗಳನ್ನಾಗಿ ಮಾಡಿ ಪ್ರತಿದಿನ ಬೆಳಗ್ಗೆ ನೀಡುತ್ತಾರೆ. ಸೊಂಟಕ್ಕೆ ಬಲ ಬರಲೆಂದು ಒಣಕೊಬ್ಬರಿಯನ್ನು ನೀಡುತ್ತಾರೆ. ಮುಂದೆ ವೈವಾಹಿಕ ಜೀವನ ಕಾಲಿಡುವಳೆಂದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಲು ಆಹಾರವನ್ನು ನೀಡುತ್ತಾರೆ.

**ಶುದ್ಧೀಕರಣ**

4ನೇ ಅಥವಾ 5ನೇ ದಿನದಂದು ಸ್ನಾನ ಮಾಡಿಸಿ, ವಿಶೇಷ ಸಸ್ಯಗಳ ಎಲೆಗಳು ಅಥವಾ ಹೂವಿನಿಂದ ಶುದ್ಧೀಕರಣ ನಡೆಸಲಾಗುತ್ತದೆ. ನಂತರ ಕುಲದೇವರ ಮುಂದೆ ದೀಪ ಹಚ್ಚಿ "ಶುದ್ಧಿ" ಪಡೆದ ಬಳಿಕ ಆಕೆ ಮತ್ತೆ ಸಾಮಾನ್ಯ ಚಟುವಟಿಕೆಗೆ ಸೇರುತ್ತಾಳೆ. ಋತುಮತಿಯಾದ ಶುಭದಿನದಿಂದ ಗುಡಿಸಲಿನಿಂದ ಹೊರಗೆ ಕರೆದುಕೊಂಡು ಹಾಡಿಯಲ್ಲಿರುವ ಮುತ್ತೈದೆಯರು ಬಿಸಿನೀರಿನಿಂದ ಸ್ನಾನ ಮಾಡಿಸಿದ ನಂತರ ಅರ್ಧಭಾಗ ಮಾಡಿದ ಸೇಲೆ(ಸೀರೆ)ಯನ್ನು ಅವಳ ದೇಹ ಮುಚ್ಚುವ ಹಾಗೆ ಒಂದು ಸುತ್ತು ಸುತ್ತಿಸಿ, ಅವಳ ಬಲ ಭುಜದ ಮೇಲೆ ಒಂದು ಕಡೆ ಗಂಟನ್ನು ಹಾಕುತ್ತಾರೆ. ಇದು ಬಹಳ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದರೂ ಇತ್ತೀಚೆಗೆ ಅರ್ಧ ಸೀರೆಯನ್ನು ಕಟ್ಟುವ ಬದಲು ಒಂದು ಆರು ಮೊಳ ಇರುವ ಹೊಸ ಸೀರೆಯನ್ನು ಉಡಿಸುತ್ತಾರೆ.

**ಹೊಸ ಬಟ್ಟೆ ಧಾರಣೆ**

ಶುದ್ಧೀಕರಣದ ನಂತರ ಹುಡುಗಿಗೆ ಹೊಸ ಬಟ್ಟೆಗಳನ್ನು ತೊಡಿಸಿ, ಆಕೆಯನ್ನು ಸಮುದಾಯದ ಮುಂದೆ 'ಮಹಿಳೆ' ಎಂಬ ಸ್ಥಾನಮಾನದಲ್ಲಿ ಪರಿಚಯಿಸುತ್ತಾರೆ. ಕೆಲವು ಕಡೆ ಸೋದರ ಮಾವ ತಂದಿರುವ ಹೊಸ ಬಟ್ಟೆಯನ್ನು ಹಾಕಿಸಿ, ಮೆರವಣಿಗೆಯ ಮುಖಾಂತರ ಮನೆಗೆ ಅವಳನ್ನು ಕರೆತರುತ್ತಾರೆ. ಆಕೆಯು ಮನೆಗೆ ಬಂದ ಮೇಲೆ ಗಂಗೆ ಪೂಜೆಯನ್ನು ಮಾಡಿಸುತ್ತಾರೆ. ನೀರು ಪಂಚಭೂತಗಳಿಗೆ ಅತ್ಯಂತ ಪವಿತ್ರವಾದದೆಂದು ಭಾವಿಸಿ ನೀರಿನಿಂದ ಸೂತಕವನ್ನು ಕಳೆದುಕೊಳ್ಳಬಹುದೆಂಬ ನಂಬಿಕೆ ಹಾಗಾಗಿ ಋತುಮತಿಯಾದವಳು ಮೈಲಿಗೆಯಾಗಿರುತ್ತಾಳೆ. ಇನ್ನುಮುಂದೆ ಶುಭಸಮಾರಂಭಗಳಲ್ಲಿ ಭಾಗವಹಿಸಲೆಂದು ಅವಳಕಡೆಯಿಂದ ಪೂಜೆಯನ್ನು ಮಾಡಿಸಿರುತ್ತಾರೆ. ಋತುಮತಿಯಾದ ಹನ್ನೆರಡು ದಿನಗಳಲ್ಲಿ ಗಂಗಾ ಪೂಜೆಯನ್ನು ಮಾಡಿ ಸೂತಕವನ್ನು ಕಳೆಯುತ್ತಾರೆ. ಈ ಗಂಗಾ ಪೂಜೆ ಮಾಡಿದ ನಂತರ, ಅವಳಿಗೆ ಹುಡಿಯನ್ನು ಮುತ್ತೈದೆಯರು ತುಂಬುತ್ತಾರೆ. ಈ ಹುಡಿತುಂಬುವ ಶಾಸ್ತ್ರವು ಗುರುಹಿರಿಯರ ನಿರ್ಧರಿಸಿರುವ ದಿನಾಂಕದಂದೆ ಮಾಡುತ್ತಾರೆ.

**ಪೂಜೆ ಮತ್ತು ಆಚರಣೆ**

ಸಮುದಾಯದ ದೇವತೆಗಳಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಅಕ್ಕಿ, ಎಳ್ಳು, ಬೆಲ್ಲ ಹಾಗೂ ಜೇನು ನೈವೇದ್ಯವಾಗಿ ಅರ್ಪಿಸಲಾಗುವುದು. ಋತುಮತಿಯಾದವಳನ್ನು ಮನೆಯೊಳಗೆ ದೇವರ ಮನೆಗೆ ಕರೆದುಕೊಂಡು ಹೋಗಿ ಅವಳಿಗೆ ಗೋವಿನ ಗಂಜಲವನ್ನು ಹಾಡಿಯ ಯಜಮಾನರಿಂದ ಪ್ರೋಕ್ಷಣೆ ಮಾಡಿಸಿ ಶುದ್ಧ ಮಾಡಿಸುತ್ತಾರೆ. ನಂತರ, ಅವಳಿಗೆ ಅಲ್ಲಿಯೇ ಕೂಡಿಸಿ, ಫಲವಂತಿಕೆಯೆ ಸಂಕೇತವಾಗಿರುವ ಅವಳ ಮಡಿಲಿಗೆ ಎಲೆ, ಅಡಿಕೆ, ಕೊಬ್ಬರಿ, ನೆಲಗಡಲೆ, ನಿಂಬೆಹಣ್ಣು, ಕುಬ್ಬಸ ಮುಂತಾದ ವಸ್ತುಗಳನ್ನು ನೀಡಿ ಅವಳಿಗೆ ಉಡಿ

ತುಂಬುವ ಶಾಸ್ತ್ರವನ್ನು ಮಾಡುತ್ತಾರೆ. ಈ ಎಲ್ಲ ಪೂಜೆಯನ್ನು ಮಾಡುವಾಗ ಹಾಡಿಯ ಯಜಮಾನನ ಹೆಂಡತಿಯೇ ಶಾಸ್ತ್ರದ ಮುಂಚೂಣಿಯಲ್ಲಿರುತ್ತಾಳೆ. ಇದಾದ ನಂತರ, ಸಮುದಾಯದ ಸಂಬಂಧಿಕರು, ಹಿರಿಯರು ಸೇರಿ ಅವಳಿಗೆ ತಮ್ಮ ಕೈಲಾದ ಉಡುಗೊರೆಯನ್ನು ನೀಡುತ್ತಾರೆ. ಆದಿನ ಬಂದ ಅಥಿತಿಗಳಿಗೆ ಅವರ ಶಕ್ತಾನುಸಾರ ಕುರಿ, ಕೋಳಿ ಮಾಂಸಹಾರವನ್ನು ಸಿದ್ದಪಡಿಸುತ್ತಾರೆ.

ಆಕೆಯನ್ನು ಮನೆಯ ಒಳಗಿನ ಸಾಮಾನ್ಯ ಚಟುವಟಿಕೆಗಳಿಂದ ದೂರವಿಟ್ಟು ವಿಶೇಷ ಕೊಠಡಿ ಅಥವಾ ಗುಡಿಸಲಿನಲ್ಲಿ ಇರಿಸಲಾಗುತ್ತದೆ. ಕುಲದೇವತೆಗೆ ಪೂಜೆ ಮಾಡಿ ಸಮುದಾಯ ಮಹಿಳೆಯರು ಸೇರಿ ಆಕೆಗೆ ಆಶೀರ್ವಾದ ನೀಡುತ್ತಾರೆ.

**ಮಟ್ಟಿನ ಸಮಯದಲ್ಲಿ ನಿಯಮಗಳು**

ಮಹಿಳೆಯರು ಮಾಸಿಕದ ದಿನಗಳಲ್ಲಿ ಅಡುಗೆ, ದೇವರ ಪೂಜೆ ಮತ್ತು ಧಾರ್ಮಿಕ ಆಚರಣೆಗಳಿಂದ ದೂರವಿರುತ್ತಾರೆ. ಸಾಧಾರಣವಾಗಿ 3 ರಿಂದ 5 ದಿನ ಪ್ರತ್ಯೇಕವಾಗಿರುತ್ತಾರೆ. ಈ ಅವಧಿಯಲ್ಲಿ ಪ್ರಕೃತಿಯ ಶುದ್ಧತೆ ಮತ್ತು ದೇಹದ ವಿಶ್ರಾಂತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ.

**ನಂಬಿಕೆಗಳು ಮತ್ತು ನಿರ್ಬಂಧಗಳು**

ಈ ಅವಧಿಯಲ್ಲಿ ಹುಡುಗಿ ಮನೆಯ ದೇವರ ಕೋಣೆಗೆ ಹೋಗಬಾರದು ಎಂಬ ನಂಬಿಕೆ ಇದೆ. ಹಾಲು, ಮೊಸರು, ಮಾಂಸ ಮುಂತಾದ ಕೆಲವು ಆಹಾರಗಳನ್ನು ಸೇವನೆ ಮಾಡಬಾರದು ಎಂದು ನಂಬಿಕೆ. ಕೃಷಿ ಕೆಲಸ, ಜೇನು ಸಂಗ್ರಹಣೆ, ಹಾಗೂ ಹಸುವಿಗೆ ಆಹಾರ ಹಾಕುವುದು ಮುಂತಾದ ಕೆಲಸದಿಂದ ದೂರವಿರಬೇಕು ಎಂದು ಪರಂಪರೆ. ಪ್ರಕೃತಿಯೊಂದಿಗೆ ನಂಟು ಹೊಂದಿರುವ ಈ ಬುಡಕಟ್ಟು, ಮುಟ್ಟಿನ ಸಮಯದಲ್ಲಿ ಹುಡುಗಿಯ ಶರೀರ ದುರ್ಬಲವಾಗಿರುತ್ತದೆ ಎಂದು ತಿಳಿದು, ಹೆಚ್ಚಿನ ಶ್ರಮದ ಕೆಲಸಗಳನ್ನು ಮಾಡಲು ತಡೆಹಿಡಿಯುತ್ತಾರೆ.

**ಸಾಮಾಜಿಕ–ಸಾಂಸ್ಕೃತಿಕ ಅರ್ಥ**

ಈ ಆಚರಣೆಗಳಲ್ಲಿ ದೇಹದ ಬದಲಾವಣೆಗಳನ್ನು ಗೌರವಿಸುವ ಮನೋಭಾವನೆ ಇದೆ. ಸಮುದಾಯದಲ್ಲಿ ಹುಡುಗಿಯ ಜೀವನದ ಹೊಸ ಹಂತವನ್ನು ಗುರುತಿಸಿ, ಅದನ್ನು ಸಾರ್ವಜನಿಕವಾಗಿ ಮಾನ್ಯತೆ ನೀಡುವ ಉದ್ದೇಶ ಇರುತ್ತದೆ. ಈ ಆಚರಣೆ ಕೇವಲ ಧಾರ್ಮಿಕ ವಿಧಿ ಮಾತ್ರವಲ್ಲ; ಇದು ಹುಡುಗಿಯನ್ನು ಮಕ್ಕಳ ಲೋಕದಿಂದ ಮಹಿಳಾ ಲೋಕಕ್ಕೆ ಪರಿವರ್ತಿಸುವ ಸಾಮಾಜಿಕ ಘಟ್ಟ. ಸಮುದಾಯದ ಹಿರಿಯ ಮಹಿಳೆಯರು ಹುಡುಗಿಗೆ ಶರೀರ, ಆರೋಗ್ಯ ಮತ್ತು ಕುಟುಂಬ ಸಂಬಂಧಿತ ಮಾರ್ಗದರ್ಶನ ನೀಡುತ್ತಾರೆ.

**ಇಂದಿನ ಬದಲಾವಣೆಗಳು**

ಶಿಕ್ಷಣ, ಆರೋಗ್ಯ ಸೇವೆಗಳು ಹಾಗೂ ಸಾಂಪ್ರದಾಯಿಕ ನಂಬಿಕೆಗಳ ಮೇಲಿನ ಪ್ರಶ್ನೆಗಳು ಜೇನು ಕುರುಬ ಸಮುದಾಯದಲ್ಲಿಯೂ ಕಾಣಿಸುತ್ತಿವೆ. ಹಳೆಯ ನಿಯಮಗಳು ನಿಧಾನವಾಗಿ ಸಡಿಲಗೊಳ್ಳುತ್ತಿದ್ದು, ಆರೋಗ್ಯದ ದೃಷ್ಟಿಯಿಂದ ಸ್ವಚ್ಛತೆ, ಪೋಷಕಾಂಶಯುಕ್ತ ಆಹಾರ ಸೇವನೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ.

**ಸಾರಾಂಶ**

ಒಟ್ಟಿನಲ್ಲಿ ಮಾತೃಪ್ರಧಾನ ಬುಡಕಟ್ಟು ಸಮುದಾಯಗಳು ಪ್ರಕೃತಿಯ ಆರಾಧಕರು. ಪ್ರಕೃತಿಯ ಮಡಿಲಲ್ಲೇ ಬಹಳ ಬದುಕುವವವರು. ಮುಟ್ಟಿನ ಆ ಸಂಧರ್ಭದಲ್ಲಿ ಹೆಣ್ಣು ಮಕ್ಕಳಿಗೆ ಆಯಾಸ ಆಗುವುದರಿಂದ ವಿಶ್ರಾಂತಿ ತೆಗೆದುಕೊಳ್ಳಲು ಅಥವಾ ಆ ಸಮಯದಲ್ಲಿ ಸುರಕ್ಷತವಾಗಿ ಇರಲಿ ಎಂದು ಮಾಡಿರುವ ಕೆಲವು ಆಚರಣೆಗಳಿವೆ. ಇದೇ ರೀತಿಯಲ್ಲಿ ಜೇನು ಕುರುಬ ಬುಡಕಟ್ಟುಗಳಲ್ಲಿ ಆಗುವ ಮುಟ್ಟಿನ ಆಚರಣೆಗಳು ಹೆಣ್ಣು ಮಕ್ಕಳಿಗೆ ಗೌರವ, ಶುದ್ಧತೆ ಮತ್ತು ಮಹಿಳಾ ಗುರುತಿನ ಸಾಮಾಜಿಕ

ಒಪ್ಪಿಗೆಯ ಪ್ರತೀಕವಾಗಿದೆ. ಆದರೆ ಕಾಲ ಬದಲಾವಣೆಯೊಂದಿಗೆ, ಆರೋಗ್ಯ ಹಾಗೂ ಮಾನವ ಹಕ್ಕುಗಳ ದೃಷ್ಟಿಯಿಂದ ಸಂಪ್ರದಾಯಗಳ ಮೌಲ್ಯಮಾಪನದ ಅಗತ್ಯವಾಗಿದ್ದು, ಹೊಸ ಪೀಳಿಗೆಯವರು ಸಂಪ್ರದಾಯ ಮತ್ತು ಆಧುನಿಕತೆಯ ಸಮತೋಲನ ಸಾಧಿಸುತ್ತಿದ್ದಾರೆ ಎಂದು ಹೇಳಬಹುದಾಗದೆ.

**ಪರಾಮರ್ಶನ ಗ್ರಂಥಗಳು**


- ಅನ್ನಪೂರ್ಣಮ್ಮ, ಸಿ, (2011). *ಋತುಚಕ್ರ (ಸಹಜ ಜೈವಿಕ ಕ್ರಿಯೆ).* ನವಕರ್ನಾಟಕ ಪ್ರಕಾಶನ.
- ಲಕ್ಷ್ಮೀದೇವಿ, ಕೆ.ವಿ. *ಋತುಚಕ್ರದ ಸಮಸ್ಯೆಗಳು ಹಾಗೂ ಸಲಹೆಗಳು.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
- ಮಧು ಗುಂಡ್ಲುಪೇಟೆ. (2001). ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ. ಅಕ್ಷತಾ ಪ್ರಕಾಶನ.
- ಮಂಜುನಾಥ ಬಿ.ಆರ್. (2014).ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ (ಮಹಾ ಪ್ರಬಂಧ), ಮೈಸೂರು ವಿವಿ.
- Ashok Kumar, H. (2015). Socio Economic Status of the Jenu Kuruba Tribes in Mysore DistrictKarnataka. IMPACT: International Journal of Research in Humanities, Arts and Literature (IMPACT: IJRHAL), 3(5), 107-118.
- Basavanagouda T. T. & Rajani. (2022). Marriage Practice among JenuKuruba, A Particularly Vulnerable Tribal Group In Karnataka.